## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1239 |
| 2 | ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 19-12-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನೈಸ್ ಸಂಸ್ಥೆಯ ರಸ್ತೆ ಮತ್ತು ಇತರ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಂಡಿದ್ದ ಎಷ್ಟು ಭೂಮಿಯನ್ನು ಸರ್ಕಾರಕ್ಕೆ ಹಿಂತಿರುಗಿಸಲಾಗಿದೆ; (ಸರ್ವೆ ನಂ ಸಹಿತ ಸದರಿ ಭೂಮಿಯ ವಿವರ ನೀಡುವುದು) ಮಾಡಿಸಿಕೊಂಡ ಭೂಮಿಯನ್ನು ರೈತರಿಗೆ ಹಿಂತಿರುಗಿಸಲಾಗುವುದೇ; ಅಥವಾ ಅನ್ಯ ಉದ್ದೇಶಕ್ಕೆ ಬಳಲಾಗುವುದೇ ಯಾವ ಉದೇಶಕ್ಕೆ ಎಷ್ಟು ವಿಸ್ತೀರ್ಣದ ಭೂಮಿ ಬಳಸಲಾಗುವುದು) | ವ್ಯವಸ್ಥಾಪಕ ನಿರ್ದೇಶಕರು, ನೈಸ್ ಸಂಸ್ಥೆ ಇವರು ಬಿಬಿಎಂಪಿ ಯೋಜನೆಗೆ ವಶಪಡಿಸಿಕೊಳ್ಳಲಾದ ಜಮೀನಿನಲ್ಲಿ ಗೊಲ್ಲಹಳ್ಳಿಯ ಸರ್ವೆ ನಂ.39ರ ಒಟ್ಟು 84 ಎಕರೆ 14 ಗುಂಟೆ ಜಮೀನನ್ನು ಸರ್ಕಾರಕ್ಕೆ ಹಿಂದಿರುಗಿಸುವುದಾಗಿ ಪತ್ರ ಸಂಖ್ಯೆ: NICE/05/197, ದಿನಾಂಕ:13-05-2022ರ ಪತ್ರದಲ್ಲಿ ತಿಳಿಸಿರುತ್ತಾರೆ.<br><br>ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಇವರು ನೈಸ್ ಸಂಸ್ಥೆಯು ಹಿಂದಿರುಗಿಸಿರುವ ಗೊಲ್ಲಹಳ್ಳಿಯ ಸರ್ವೆ ನಂ.39 ಮತ್ತು 58ರ 170 ಎಕರೆ ಜಮೀನನ್ನು ಘನತ್ಯಾಜ್ಯ ನಿರ್ವಹಣೆಗಾಗಿ ಹಸ್ತಾಂತರಿಸುವಂತೆ ದಿನಾಂಕ: 28-02-2024ರ ಪತ್ರದಲ್ಲಿ ಕೋರಿರುತ್ತಾರೆ.<br><br>ನೈಸ್ ಸಂಸ್ಥೆಯು ಗೊಲ್ಲಹಳ್ಳಿಯ ಸರ್ವೆ ನಂ. 39ರಲ್ಲಿ ಒಟ್ಟು 84 ಎಕರೆ 14 ಗುಂಟೆ ಸರ್ಕಾರಿ ಜಮೀನನ್ನು ಮಾತ್ರ ಸರ್ಕಾರಕ್ಕೆ ಹಿಂದಿರುಗಿಸಿದ್ದು, ಈ ಜಮೀನನ್ನು ಹಸ್ತಾಂತರಿಸಲು ಸರ್ಕಾರದ ಆದೇಶ ಸಂಖ್ಯೆ: ಲೋಇ 438 ಸಿಆರ್‌ಎಂ 2022, ದಿನಾಂಕ: 31-01-2025 ರಲ್ಲಿ ಆದೇಶಿಸಲಾಗಿರುತ್ತದೆ. |
| ಆ) | ಹಿಂತಿರುಗಿಸಲಾದ ಭೂಮಿಯಲ್ಲಿ ಬಿಬಿಎಂಪಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; | |
| ಇ) | ಸದರಿ ಭೂಮಿಯು ಹಲವು ವಸತಿ ಪ್ರದೇಶಕ್ಕೆ ಹೊಂದಿಕೊಂಡಂತೆ ಇದ್ದು, ಇಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಿದ್ದಲ್ಲಿ ಇಲ್ಲಿ ವಾಸವಿರುವ ಸಾರ್ವಜನಿಕರಿಗೆ ಮತ್ತು ರಸ್ತೆಯಲ್ಲಿ ಸಂಚರಿಸುವವರಿಗೆ ಸಮಸ್ಯೆಯುಂಟಾಗುವುದಿಲ್ಲವೇ? | ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದಂತೆ ಸದರಿ ಜಮೀನಿನ ಸುತ್ತ-ಮುತ್ತಲಿನ ವಸತಿ ಪ್ರದೇಶ/ ವಾಣಿಜ್ಯ ಪ್ರದೇಶಗಳಿಂದ ಕನಿಷ್ಠ ದೂರದ ಮಾರ್ಗಸೂಚಿಗಳನ್ವಯ ಅನುಮೋದನೆಯನ್ನು ಮತ್ತು ಎಲ್ಲಾ ತರಹದ ಸಂಬಂಧಪಟ್ಟ ಅನುಮತಿಗಳನ್ನು ಪಡೆದು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಯೋಜಿಸಿದೆ. |

**ನಅಇ 631 ಎಂಎನ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ